# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ

## ಸಿ.ಸಿ ಸಂಖ್ಯೆ: 3/2022

| | |
|---|---|
| ಹೆಸರು | :ಚಂದ್ರಹಾಸ ರೈ |
| ತಂದೆಯ ಹೆಸರು | :ದೇವಪ್ಪ ರೈ |
| ಫ್ರಾಯ | :72 ವರ್ಷ |
| ಉದ್ಯೋಗ | :ನಿವೃತ್ತ ವಿಜಯ ಬ್ಯಾಂಕ್ ಮ್ಯಾನೇಜರ್ |
| ವಾಸ | :ಪುತ್ತೂರು |

**ದಿನಾಂಕ 28.02.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು 2009 ರಿಂದ 2013ರವರೆಗೆ ದೊಡ್ಡತೋಟ ವಿಜಯ ಬ್ಯಾಂಕ್ ಶಾಖೆಯಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಮರ್ಕಂಜ ಸಿ.ಎ. ಬ್ಯಾಂಕ್ ನಿಂದ ವಿವಿಧ ಫಲಾನುಭವಿಗಳ ಒಟ್ಟು 16 ಚೆಕ್ಕುಗಳನ್ನು ನಗದೀಕರಣಕ್ಕಾಗಿ ನಮ್ಮ ಶಾಖೆಯಲ್ಲಿ ಸಲ್ಲಿಸಿದ್ದು, ದಿಃ 27.10.2011 ರಂದು ಪೊಲೀಸರಾದ ಪ್ರವೀಣ್ ನೀಲಮ್ಮನವರ್ ರವರು ನಮ್ಮ ಬ್ಯಾಂಕಿಗೆ ಸಿ.ಎ ಬ್ಯಾಂಕಿನವರು ನಗದೀಕರಣಕ್ಕಾಗಿ ಹಾಜರು ಪಡಿಸಿದ 16 ಚೆಕ್ಕುಗಳನ್ನು ಹಾಜರು ಪಡಿಸುವಂತೆ ನನಗೆ ತಿಳಿಸಿದ್ದು, ಅದರಂತೆ ನಾನು ಅದೇ ದಿನ ಸದರಿ ಚೆಕ್ಕುಗಳನ್ನು ಸುಳ್ಯ ಪೊಲೀಸ್ ಠಾಣೆಗೆ ಹೋಗಿ ಚಾಸಾ-37 ರವರ ಮುಂದೆ ಹಾಜರು ಪಡಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ-22 ಮತ್ತು 23 ರವರೂ ಸಹ ಹಾಜರಿದ್ದರು. ಸದರಿ ಚೆಕ್ಕುಗಳನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಸ್ವಾಧೀನ ಪಡಿಸಿಕೊಂಡು ಪಂಚನಾಮೆ

ಮಾಡಿರುತ್ತಾರೆ. ನಾನು ಹಾಜರು ಪಡಿಸಿದ 16 ಚೆಕ್ಕುಗಳನ್ನು ಈಗಾಗಲೇ ಸಿಸಿ ನಂ.348/2015 ರಲ್ಲಿ ನೊಡಿ ಗುರುತಿಸಿರುತ್ತೇನೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–6 ಎಂದು, ಸಾಕ್ಷಿಯ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ**

ಸದರಿ ಚೆಕ್ಕುಗಳನ್ನು ಹಾಜರು ಪಡಿಸುವಂತೆ ಪೊಲೀಸರು ನನಗೆ ಲಿಖಿತವಾಗಿ ತಿಳಿಸಿದ್ದರೋ ಇಲ್ಲವೋ ನನಗೆ ನೆನಪಿಲ್ಲ. ಕಾರಣ ಘಟನೆ ನಡೆದು ಈಗ 15 ವರ್ಷಗಳಾಗಿರುತ್ತದೆ. ಸದರಿ ಚೆಕ್ಕುಗಳು 2005 ಮತ್ತು 2006ನೇ ಇಸವಿಗೆ ಸಂಬಂಧ ಪಟ್ಟ ಚೆಕ್ಕುಗಳಾಗಿದ್ದು. ಅವು ನಾನು ದೊಡ್ಡತೋಟ ಬ್ರಾಂಚ್ ಗೆ ಬರುವ ಮುಂಚೆ ನಮ್ಮ ಬ್ಯಾಂಕಿಗೆ ಹಾಜರು ಪಡಿಸಲಾಗಿರುತ್ತದೆ ಎಂದರೆ ಸರಿ. ಆ ಕಾರಣಕ್ಕೆ ಸದರಿ ಚೆಕ್ಕುಗಳ ವ್ಯವಹರಣೆ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ಪೊಲೀಸರಿಗೆ ನಾವು ಮಾಹಿತಿಯನ್ನು ನೀಡಬೇಕಾದರೆ ಅವರು ಲಿಖಿತವಾಗಿ ಮನವಿ ಸಲ್ಲಿಸಬೇಕು ಎಂದರೆ ಸರಿಯಲ್ಲ. ಪೊಲೀಸರು ಮೌಖಿಕವಾಗಿ ಕೇಳಿದರೂ ಸಹ ಕೊಡಬೇಕಾಗುತ್ತದೆ. ಚಾಸಾ–22 ಮತ್ತು 23 ರವರನ್ನು ಪೊಲೀಸ್ ಠಾಣೆಗೆ ಯಾರು ಕರೆಸಿದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾ–22 ಮತ್ತು 23 ರವರು ಸದರಿ ಪಂಚನಾಮೆಗೆ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ